ಅರಣ್ಯ ಇಲಾಖೆಯಲ್ಲಿರುವ ಖಾಲಿ ಹುದ್ದೆಗಳು.

2851:(4026)

ಶ್ರೀ ಯು.ಬಿ.ಬಣಕಾರ (ಹಿರೇಕೆರೂರು): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಣ್ಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು (ವಿವರವನ್ನು ಒದಗಿಸುವುದು)

ಆ) ಅವುಗಳನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು):

ಅ) ಅರಣ್ಯ ಇಲಾಖೆಯಲ್ಲಿ ಖಾಲಿ ಇರುವ ಒಟ್ಟು ಹುದ್ದೆಗಳ ಸಂಖ್ಯೆ 2468. ಅವುಗಳ ವಿವರ ಈ ಕೆಳಗಿನಂತಿದೆ.

		ನೇರ ನೇಮಕಾತಿ	ಬಡ್ತಿ
1)	ಉಪ ಅರಣ್ಯ ಸಂರಕ್ಷಣಾಧಿಕಾರಿ (ರಾಜ್ಯ ಆಡಳಿತ ಸೇವೆ)	-	3
2)	ಆಡಳಿತಾಧಿಕಾರಿ	-	3
3)	ಆಡಳಿತ ಸಹಾಯಕರು	-	5
4)	ವ್ಯವಸ್ಥಾಪಕರು	-	55
5)	ಅಧೀಕ್ಷಕರು	-	29
6)	ವಲಯ ಅರಣ್ಯಾಧಿಕಾರಿ	221	-
7)	ಪನಪಾಲಕರು	1039	-
8)	ಸರ್ವೆಯರ್	5	-
9)	ಪ್ರಥಮ ದರ್ಜೆ ಸಹಾಯಕರು	56	55
10)	ನಕ್ಷೆಗಾರರು	4	-

11) ಶ್ರೇಫ್ಸ್‌ಲಿಪಿಗಾರರು	5	-
12) ಬೆರಳಚ್ಚುಗಾರರು	3	-
13) ಅರಣ್ಯ ರಕ್ಷಕರು	948	-
14) ವಾಹನ ಚಾಲಕರು	32	-
15) 'ಡಿ' ದರ್ಜೆ ಹುದ್ದೆಗಳು	55	-
	2368	100

ಆ) 1) ರಾಜ್ಯ ಅರಣ್ಯ ಸೇವೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ ವೃಂದದಲ್ಲಿ ಖಾಲಿ ಇರುವ (3) ಹುದ್ದೆಗಳನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮುಂಬಡ್ತಿ ನೀಡಿ ಭರ್ತಿ ಮಾಡಲಾಗುತ್ತಿದೆ.

2) ಖಾಲಿ ಇರುವ 3 ಆಡಳಿತಾಧಿಕಾರಿ ಹುದ್ದೆಗಳನ್ನು ಆಡಳಿತ ಸಹಾಯಕರಿಗೆ ಬಡ್ತಿ ನೀಡಿ ಭರ್ತಿ ಮಾಡಲಾಗುವುದು.

3) ಖಾಲಿ ಇರುವ (5) ಆಡಳಿತ ಸಹಾಯಕರ ಹುದ್ದೆಗಳನ್ನು ವ್ಯವಸ್ಥಾಪಕರಿಗೆ ಬಡ್ತಿ ನೀಡಿ ತುಂಬಲಾಗುವುದು.

4) ಖಾಲಿ ಇರುವ (5) ವ್ಯವಸ್ಥಾಪಕ ಹುದ್ದೆಗಳನ್ನು ಅಧೀಕ್ಷರಿಗೆ ಬಡ್ತಿ ನೀಡಿ ತುಂಬಲಾಗುವುದು. ಮೇಲೆ ಹೇಳಿದ ಹುದ್ದೆಗಳಿಗೆ ಬಡ್ತಿ ನೀಡಿ ಭರ್ತಿ ಮಾಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ. ಪ್ರಥಮ ದರ್ಜೆ ಸಹಾಯಕ ಮತ್ತು ಅಧೀಕ್ಷಕರ ಬಡ್ತಿಯಿಂದ ತುಂಬಬೇಕಾದ ಖಾಲಿ ಹುದ್ದೆಗಳನ್ನು ತುಂಬಲು ಪೋಷಕ ಹುದ್ದೆಯ ಜೇಷ್ಠತೆಯನ್ನು ಸರಿಪಡಿಸಿ ತುಂಬಬೇಕಾಗಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

5) ನೇರ ನೇಮಕಾತಿಯಿಂದ ತುಂಬಬೇಕಾದ ಹುದ್ದೆಗಳನ್ನು ತುಂಬಲು ಸರ್ಕಾರದ ಮಿತವ್ಯಯ ಆದೇಶವಿರುವುದರಿಂದ ತುಂಬಲಾಗಿರುವುದಿಲ್ಲ. ವಲಯ ಅರಣ್ಯಾಧಿಕಾರಿಗಳ, ವನಪಾಲಕರ, ಅರಣ್ಯ ರಕ್ಷಕರ ಹಾಗೂ ಸರ್ವೆಯರ್ ಹುದ್ದೆಗಳನ್ನು ಮಿತವ್ಯಯ ಆದೇಶ ಸಡಿಲಿಸಿ ತುಂಬಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಪ್ರಸ್ತಾವನೆಯನ್ನು ಸಚಿವ ಸಂಪುಟದ ಅನುಮೋದನೆಗೆ ಒಪ್ಪಿಸಲಾಗಿದೆ.

6) 1039 ನೇರ ನೇಮಕಾತಿಯ ವನಪಾಲಕರ ಖಾಲಿ ಹುದ್ದೆಗಳಲ್ಲಿ ಸರ್ಕಾರದ ಕೆಲಸದ ಹಿತದೃಷ್ಟಿಯಿಂದ 817 ನೇರ ನೇಮಕಾತಿ ವನಪಾಲಕರ ಹುದ್ದೆಗಳನ್ನು ಕೆ.ಸಿ.ಎಸ್.ಆರ್. ನಿಯಮ 32ರ ಪ್ರಕಾರ ಅರಣ್ಯ ರಕ್ಷಕರ ಹುದ್ದೆಯಿಂದ ಪ್ರಭಾರ

ವ್ಯವಸ್ಥೆ ಮಾಡಿ ತುಂಬಲಾಗಿದೆ. ಹೀಗೆ ಪ್ರಭಾರ ವ್ಯವಸ್ಥೆ(ಕೆಸಿಎಸ್ಆರ್ ನಿಯಮ 32ರಂತೆ)ಯಿಂದ ತುಂಬಿದ ನಂತರವೂ 222 ವನಪಾಲಕರ ಹುದ್ದೆಗಳು ಖಾಲಿ ಇರುತ್ತವೆ. ಹಾಗೆಯೇ 221 ವಲಯ ಅರಣ್ಯಾಧಿಕಾರಿ ಹುದ್ದೆಗಳನ್ನು ಆಡಳಿತ ಹಿತ ದೃಷ್ಟಿಯಿಂದ ಪ್ರಭಾರ ವ್ಯವಸ್ಥೆಯ ಮೇಲೆ ಕೆ.ಸಿ.ಎಸ್.ಆರ್.ನಿಯಮ 32ರ ಅಡಿಯಲ್ಲಿ ತುಂಬಿದೆ. ಮುಂದುವರೆದು 79 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಪ್ರಭಾರ ವ್ಯವಸ್ಥೆಯಲ್ಲಿ ತುಂಬಿದೆ.

ವಿಜಾಪುರ ನಗರದಲ್ಲಿ ನಿರ್ಮಿಸಲಾಗಿರುವ ಕಂದಗಲ್ಲ ಹನುಮಂತರಾಯ ರಂಗಮಂದಿರಕ್ಕೆ ಸೌಲಭ್ಯ.

2852:(3905)

ಶ್ರೀ ಬಸವನಗೌಡ ರಾ.ಪಾಟೀಲ (ವಿಜಾಪುರ): ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ನಗರದಲ್ಲಿ ನಿರ್ಮಿಸಲಾಗಿರುವ ಕಂದಗಲ್ ಹನುಮಂತರಾಯ ರಂಗಮಂದಿರ ಕನಿಷ್ಟ ಸೌಲಭ್ಯಗಳು, ಶೌಚಾಲಯ, ಪ್ರಸಾದನ ಕೋಣೆ, ಜನರೇಟರ್ ಸೌಲಭ್ಯ, ಬಯಲುರಂಗಮಂದಿರ, ಮೈಕ್, ಧ್ವನಿವರ್ಧಕ ವ್ಯವಸ್ಥೆಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ, ಸೌಲಭ್ಯಗಳನ್ನು ಪಡೆಯಲು ಹಣ ಬಿಡುಗಡೆ ಮಾಡುವುದೆ?

ಇ) ಸಾಂಸ್ಕೃತಿಕ ಚಟುವಟಿಕೆಗಳ ಪ್ರೋತ್ಸಾ ಹಕ್ಕೆ ಇರುವ ರಂಗಮಂದಿರ ಇನ್ನಿತರೆ ಚಟುವಟಿಕೆಗಳಿಗೆ ಉಪಯೋಗವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ/

ಈ) ಸರ್ಕಾರವು ಈ ಬಗ್ಗೆ ತೆಗೆದುಕೊಳ್ಳಲಿರುವ ಕ್ರಮಗಳೇನು?

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವೆಯರು):

ಅ) ಬಂದಿದೆ.

ಆ) ಪರಿಶೀಲಿಸಲಾಗುವುದು.

ಇ) ಇಲ್ಲ.